

# ಶ್ರೀರಾಮಕೃಷ್ಣ ಮಹಿಮಾ

ಮೂಲ ಬಂಗಾಳಿ : ಅಕ್ಷಯಕುಮಾರ್ ಸೇನ್

## ಜೈ ಗುರುದೇವ

## ಅಧ್ಯಾಯ ೪ — ರಘುವೀರನ ಮಾಲೆ

ಜಯ ರಾಮಕೃಷ್ಣವಾಂಛಿತ ಕಲ್ಪತರುವೆ |
ಜಯ ದೀನಬಂಧು ಭಗವಾನ್ ಜಗದ್ಗುರುವೆ ||

ಜಯ ರಾಮಕೃಷ್ಣರಾಪ್ತೇಷ್ಟ ಬಂಧುಗಳೇ |
ನಯ ಭಯದಿ ಪಾದಧೂಳಿಯ ಬೇಡುತಿರುವೆ ||

೩೫೩. ಗುರುದೇವನಾ ಬಾಲಲೀಲೆ ಬಹು ರಮ್ಯ |
ಇದರಿಂದ ಮನಕಹುದು ಭಕ್ತಿ ಪಾರಮ್ಯ ||

೩೫೪. ಖುದಿರಾಮನೊಂದು ದಿನ ಹೂವುಗಳ ಕೊಯ್ದು |
ಹದವರಿತು ಗಂಧವನ್ನಣಿಗೊಳಿಸುತಂದು ||

೩೫೫. ಶ್ರೀಗಂಧದೊಡನೆ ಬಹುವಿಧದ ಹೂವಿರಿಸಿ |
ಹೂಗಂಧ ಮಾಲೆಯನು ಗೈದ ಮನವಿರಿಸಿ ||

೩೫೬. ರಘುವೀರ ಸಾಲಿಗ್ರಾಮವನು ಪೂಜಿಸಲು |
ಬಗೆಬಗೆಯಲಂಕಾರ ಮಾಡಿದನು ಅಂದು ||

೩೫೭. ಸಾಲಿಗ್ರಾಮದ ಶಿಲೆಯು ದೊರೆತ ಬಗೆಯನ್ನು |
ವಿವರಿಸುವೆನೊಲಿದು ಕೇಳಾ ಕತೆಯ ನೀನು ||

೩೫೮. ಕಾಮಾರಪುಕುರದಾ ನೈಋತ್ಯ ದಿಸೆಗೆ |
ಮೇದಿನೀಪುರವೆಂಬ ಊರು ಆ ಕಡೆಗೆ ||

೩೫೯. ಖುದಿರಾಮನಗ್ರಜನ ಮಕ್ಕಳಿಹರಲ್ಲಿ |
ಪಯಣಕತಿದೂರವದು ಮೂರುದಿನದವಧಿ ||

೩೬೦. ಒಮ್ಮೆಯಾಕಡೆಗೆ ಈ ಬ್ರಾಹ್ಮಣನು ಹೊರಟ |
ನಡೆನಡೆದು ದಿನವೊಂದನುತ್ತರಿಸಿ ದಣಿದ ||

೩೬೧. ಮರುದಿನದ ಪಯಣ ಆಯಾಸಕರವಾಯ್ತು |
ಮರದ ನೆಳಲಲಿ ಮಲಗೆ ನಿದ್ದೆಯದು ಬಂತು ||

೩೬೨. ಆ ನಿದ್ದೆಯಲಿ ಕಂಡನವನೊಂದು ಕನಸು |
ಬಿಗಿದ ಜಟೆಯಲಿ ಬಿಲ್ಲು ಬಾಣಗಳ ಹಿಡಿದು ||

೩೬೩. ದೂರ್ವೆಯಾ ಬಣ್ಣದಿಂದಿಹ ಹುಡುಗನೋರ್ವ
ಪೇಳತೊಡಗಿದನು ಸ್ವಪ್ನದಿ ತನ್ನ ನೋವ

೩೬೪. ಸಾಧುವೊಬ್ಬನು ನನ್ನನಿಲ್ಲಿ ಕರೆತಂದ
ಈ ಭತ್ತದಾ ಗದ್ದೆ ಬಳಿ ಬಿಟ್ಟುಹೋದ

೩೬೫. ಒಪ್ಪೊತ್ತಿನೂಟವೂ ನನಗೆ ಸಿಗದಲ್ಲ
ಹಸಿವಿನಿಂದಲಿ ಕಾಲ ನೂಕುತಿಹೆನಲ್ಲ

೩೬೬. ನಿನ್ನ ಮನೆಗೆನ್ನ ಕರೆಕೊಂಡು ಹೋಗಯ್ಯ
ನಿನ್ನೊಡನೆ ಬರಲಾಸೆ ಕೊಡಹದಿರು ತಲೆಯ ||

೩೬೭. ಅದ ಕೇಳಿ ಕಾತರಿಸಿ ಬ್ರಾಹ್ಮಣನು ಪೇಳ್ದ
ಮಗನೆ ನೀನೇನ ಪೇಳುತಲಿರುವೆ ಕಂದ ||

೩೬೮. ನಾನೆ ಕಡುಬಡವ ಉಡಲುಣಲು ಗತಿಯಿಲ್ಲ
ಎನ್ನಯ ಕುಟುಂಬವನೆ ಪೊರೆವ ಬಲವಿಲ್ಲ

೩೬೯. ನಿನ್ನಿಚ್ಛೆಯನು ನಾನು ಪೂರೈಸಲಾರೆ
ಅದ ಕೇಳಿ ಹುಡುಗನಿಂತೆಂದನವನೊಡನೆ ||

೩೭೦. ಪ್ರತಿದಿವಸ ಒಂದೊಂದು ಮುಷ್ಟಿಯಕ್ಕಿಯನೆ
ನೀಡಿದರೆ ಸಾಕು ಮತ್ತೇನನೂ ಬಯಸೆ ||

೩೭೧. ಎನುತಿರಲು ನಿದ್ದೆಕಳೆದಾದುದೆಚ್ಚರಿಕೆ |
ಆಗ ಏನೂ ಕಾಣಲಿಲ್ಲವಾತನಿಗೆ ||

೩೭೨. ಕನಸ ಯೋಚಿಸುತಲವನಾಶ್ಚರ್ಯಗೊಂಡ
ಭತ್ತದಾ ಹೊಲದೆಡೆ ಕುತೂಹಲದಿ ಹೋದ ||

೩೭೩. ಅಲ್ಲಿ ಏನೂ ಕಾಣಲಿಲ್ಲವಾತನಿಗೆ |
ಬಂದನು ನಿರಾಶೆಯಲಿ ಪುನಃ ಮರದೆಡೆಗೆ ||

ಕನ್ನಡ ಕಾವ್ಯಾನುವಾದ: ಮಂಜುನಾಥ ಭಾಗವತ ಹೊಸ್ತೋಟ, ಸಹಾಯ : ಕೃಷ್ಣ ಹೆಗಡೆ ಮತ್ತು ರಾಮಕೃಷ್ಣ ಹೆಗಡೆ, ಭೈರುಂಬೆ